# ಆಚಾರ್ಯ ರಾಮಾನುಜ

ಪುಷ್ಪ ಶೇಷಾದ್ರಿ

*ಆಚಾರ್ಯ ರಾಮಾನುಜರು ಜಗತ್ತಿನ ಶ್ರೇಷ್ಠ ದಾರ್ಶನಿಕರಲ್ಲಿ ಒಬ್ಬರು. ವೇದಾಂತದ ಭಕ್ತಿ ಸಿದ್ಧಾಂತವನ್ನು ಸಮರ್ಥ ರೀತಿಯಲ್ಲಿ ಪ್ರತಿಪಾದಿಸಿದ ಪ್ರಥಮ ಆಚಾರ್ಯರ ಸ್ಥಾನ ಇವರಿಗೆ ಲಭಿಸುತ್ತದೆ. ಇವರ ಸಂಕ್ಷಿಪ್ತ ಜೀವನವನ್ನು ನಿರೂಪಿಸಿರುವ ಶ್ರೀಮತಿ ಪುಷ್ಪ ಶೇಷಾದ್ರಿ ಅವರು ಮೈಸೂರು ರಾಮಕೃಷ್ಣ ಆಶ್ರಮದ ಭಕ್ತರು.*

ಆಸೂರಿ ಕೇಶವದೀಕ್ಷಿತ ಮತ್ತು ಕಾಂತಿಮತಿ ಎಂಬ ದಂಪತಿಗಳಿಗೆ ಶ್ರೀಪೆರಂಬುದೂರ್‌ನಲ್ಲಿ ಜನಿಸಿದ ಪುತ್ರನೇ ಶ್ರೀರಾಮಾನುಜರು. ಕ್ರಿ.ಶ. ೧೦೧೭ರಲ್ಲಿ ಅವರ ಜನನ ವಾಯಿತು. ಜನ್ಮತಃ ರಾಮಾನುಜರು ವಿಶೇಷ ಜ್ಞಾನಸಂಪನ್ನ ರಾಗಿದ್ದರು. ಜಾತಕಾದಿ ಕರ್ಮಗಳೆಲ್ಲ ಕಳೆದು, ಹದಿನಾರು ವರ್ಷಗಳಲ್ಲಿ ವೇದಪಾರಂಗತರಾದರು.ಅವರಿಗೆ ಹದಿನಾರನೇ ವರ್ಷದಲ್ಲಿಯೇ ವಿವಾಹವಾಯಿತು. ಅನಂತರ ಮುಂದಿನ ವಿದ್ಯಾಭ್ಯಾಸಕ್ಕಾಗಿ ಇಡೀ ಕುಟುಂಬದವರು ಕಾಂಚೀಪುರಂಗೆ ಹೋಗಿ ನೆಲಸಿದರು. ಅಲ್ಲಿ ಅವರಿಗೆ ಅದ್ವೈತ ದಾರ್ಶನಿಕರಾದ ಯಾದವಪ್ರಕಾಶರಲ್ಲಿ ವಿದ್ಯಾಭ್ಯಾಸ ಮಾಡಲು ಅವಕಾಶ ದೊರಕಿತು.

ಒಮ್ಮೆ ಗುರುಗಳು ತೈತ್ತಿರೀಯ ಉಪನಿಷತ್ತಿನ **ಸತ್ಯಂ ಜ್ಞಾನಂ ಅನಂತಂ** ಬ್ರಹ್ಮ ಎಂಬುದಕ್ಕೆ ವ್ಯಾಖ್ಯಾನ ಮಾಡುವಾಗ ಬ್ರಹ್ಮನು ಸತ್ಯ, ಜ್ಞಾನ ಮತ್ತು ಅನಂತಸ್ವರೂಪ, ಅವು ಅವನ ಗುಣಗಳಲ್ಲ ಎಂದು ವಿವರಿಸಿದರು.ಇವರ ತರ್ಕ ರಾಮಾನುಜರಿಗೆ ಒಪ್ಪಿಗೆಯಾಗಲಿಲ್ಲ. ಅದಕ್ಕೆ ರಾಮಾನುಜರು, "ಹೂವು ಎಂದಮೇಲೆ ಸುವಾಸನೆ, ಬಣ್ಣ, ಮಾಧುರ್ಯಗಳಿದ್ದಿರಲೇ ಬೇಕು. ಹಾಗೆಯೇ ಈ ಮೂರೂ ಬ್ರಹ್ಮನ ಗುಣಗಳು" ಎಂದು ವಾದ ಮಾಡಿದರು. ಇದರಿಂದ ಗುರುಗಳು ಕೋಪಗೊಂಡು ರಾಮಾನುಜರನ್ನು ಅವಿಧೇಯ ಶಿಷ್ಯನೆಂದು ಹೇಳಿ ಹೊರಹಾಕಿದರು. ಅನಂತರ ಇಂತಹ ಮೇಧಾವಿ ಶಿಷ್ಯನಿಂದ ತಮ್ಮ ಪ್ರಭಾವಕ್ಕೆ ಕುಂದು ಬರುವುದೆಂದೆಣಿಸಿ, ಹೇಗಾದರೂ ಮಾಡಿ, ರಾಮಾನುಜರನ್ನು ಮುಗಿಸಿಬಿಡಬೇಕೆಂದು ಪಣತೊಟ್ಟರು. ಇದಕ್ಕಾಗಿ ಒಂದು ಉಪಾಯ ಹೂಡಿದರು. ಕೆಲವು ಶಿಷ್ಯರನ್ನು ಕರೆದು ಗೋಪ್ಯ ವಾಗಿ ಈ ವಿಷಯವನ್ನು ತಿಳಿಸಿದರು. ತೀರ್ಥಯಾತ್ರೆಯ ನೆಪ ದಲ್ಲಿ ವಾರಣಾಸಿಗೆ ಹೋಗಿ ಅಲ್ಲಿಯ ಮಣಿಕರ್ಣಿಕ ಘಟ್ಟದಲ್ಲಿ ರಾಮಾನುಜರನ್ನು ನೀರಿನಲ್ಲಿ ಮುಳುಗಿಸಿಬಿಡಬೇಕೆಂದು ತೀರ್ಮಾನಿಸಿದರು. ರಾಮಾನುಜರಿಗೆ ಹೇಳಿಕಳುಹಿಸಿ ಯಾತ್ರೆಗೆ ಅವರೂ ಬರಬೇಕೆಂದು ಆಹ್ವಾನಿಸಿದರು.



ಗುರು-ಶಿಷ್ಯರುಗಳು ನಿಗದಿಪಡಿಸಿದಂತೆ ಯಾತ್ರೆಗೆ ಹೊರಟರು. ಆ ಶಿಷ್ಯರಲ್ಲಿ ಗೋವಿಂದ ಭಟ್ಟರೆಂಬುವರು ರಾಮಾನುಜರ ಹಿತೈಷಿಗಳಾಗಿದ್ದರು. ಅಂತೆಯೇ ಗುರುವಿನ ಯೋಜನೆಯನ್ನು ರಾಮಾನುಜರಿಗೆ ಸಮಯ ನೋಡಿ ಸೂಕ್ಷ್ಮವಾಗಿ ತಿಳಿಸಿ, ಹೇಗಾದರೂ ಮಾಡಿ ಅಲ್ಲಿಂದ ತಪ್ಪಿಸಿಕೊಂಡು ಹೋಗಲು ಸಲಹೆ ನೀಡಿದರು. ರಾಮಾನುಜರಿಗೆ ನಂಬಲಾಗಲಿಲ್ಲ. ಆದರೂ ಒಂದು ದಟ್ಟವಾದ ಕಾಡಿನಲ್ಲಿ ಹೋಗುತ್ತಿರುವಾಗ, ಅವರು ತಮ್ಮ ದಾರಿಯನ್ನು ಬದಲಿಸಿದರು. ಘೋರ ಅರಣ್ಯದಲ್ಲಿ ಎಲ್ಲಿ ಹೋಗಬೇಕೆಂದು ತಿಳಿಯಲಿಲ್ಲ. ಹೀಗೆ ಯೋಚಿಸುತ್ತಿದ್ದಾಗ, ಒಬ್ಬ ಬೇಡ ಮತ್ತು ಆತನ ಪತ್ನಿ ರಾಮಾನುಜರ ಕಣ್ಣಿಗೆ ಕಾಣಿಸಿದರು. ಅವರ ಕಷ್ಟದ ಪರಿಸ್ಥಿತಿಯನ್ನರಿತು ತಾವೂ ಕಾಂಚೀಪುರಕ್ಕೆ ಹೋಗುತ್ತಿರುವುದಾಗಿಯೂ ರಾಮಾನುಜರಿಗೆ ದಾರಿ ತೋರಿಸಿ ಸಹಾಯ ಮಾಡುವುದಾಗಿಯೂ ಆ ದಂಪತಿಗಳು ತಿಳಿಸಿದರು. ಮೂವರು ಆ ರಾತ್ರಿ ಒಂದು ದೊಡ್ಡ ವೃಕ್ಷದ ಕೆಳಗೆ ಮಲಗಿದರು. ರಾಮಾನುಜರು ಬೆಳಿಗ್ಗೆ ಎದ್ದು ನೋಡಿದಾಗ ಬೇಡದಂಪತಿಗಳು ಮಾಯವಾಗಿದ್ದರು. ಅಲ್ಲಿ ಜನಗಳ ಸಂಚಾರ ಸಹ ಕಂಡರು. ಅವರನ್ನು ವಿಚಾರಿಸಲಾಗಿ, ಅದು ಕಾಂಚೀಪುರವೆಂದು ತಿಳಿಯಿತು. ಇಷ್ಟು ಬೇಗ ಅಷ್ಟು ದೂರ ಯಾತ್ರೆ ಮುಗಿಸಿ ಕಾಂಚೀಪುರಕ್ಕೆ ಬರಬೇಕಾದರೆ ಹೇಗೆ ಸಾಧ್ಯವೆಂದು ಯೋಚಿಸಿ, ಬೇಡ ಮತ್ತು ಆತನ ಪತ್ನಿ ಮತ್ತಾರೂ ಅಲ್ಲದೆ ದೈವಸ್ವರೂಪವೆಂದು ಅರಿತರು.

ಹೀಗಿರುವಲ್ಲಿ ಕಂಚಿ ವರದರಾಜನ ಪರಮಭಕ್ತರಾದ ಕಾಂಚಿಪೂರ್ಣರೆಂಬುವರ ಪರಿಚಯವಾಗಿ ಒಮ್ಮೆ ಅವರನ್ನು ರಾಮಾನುಜರು ತಮ್ಮ ಮನೆಗೆ ಭೋಜನಕ್ಕೆ ಆಹ್ವಾನಿಸಿದರು. ಅವರು ಒಪ್ಪಿದ್ದರಿಂದ ವರದರಾಜನಿಗೆ ವಂದನೆ ಸಲ್ಲಿಸಿ, ಮನೆಗೆ

ಬಂದು ಸಹಧರ್ಮಿಣಿಗೆ ಉತ್ತಮವಾದ ಭೋಜನವನ್ನು ತಯಾರಿಸಲು ಹೇಳಿದರು. ತದನಂತರ ನಿತ್ಯಕರ್ಮಗಳನ್ನು ಮಾಡಿ, ಭಗವದಾರಾಧನೆಯನ್ನು ಮುಗಿಸಿ ಅತಿಥಿ ಕಾಂಚಿಪೂರ್ಣರನ್ನು ಕರೆತರಲು ಅವರ ಕುಟೀರಕ್ಕೆ ಹೋದರು. ಅಷ್ಟರಲ್ಲಿ ಪೂರ್ಣರು ತಮ್ಮ ಪೂಜಾದಿ ವಿಧಿಗಳನ್ನು ಮುಗಿಸಿ, ಬೇರೆಯ ಮಾರ್ಗವಾಗಿ ರಾಮಾನುಜರ ಮನೆಗೆ ಊಟಕ್ಕೆಂದು ಬಂದರು. ತತ್‌ಕ್ಷಣ ಅವರಿಗೆ ದೇವಸ್ಥಾನದಿಂದ ಬೇಗ ಬರಬೇಕೆಂದು ಕರೆಬಂದಿತು. ಆಗ ಅವರು ರಾಮಾನುಜರ ಪತ್ನಿಗೆ ಕೂಡಲೆ ಉಣಬಡಿಸಬೇಕೆಂದೂ ಮತ್ತೆ ತಾನು ಬರಲಾಗುವುದಿಲ್ಲವೆಂದೂ ತಿಳಿಸಿದರು. ಅಂತೆಯೇ ಭೋಜನಮಾಡಿ, ರಾಮಾನುಜರಿಗೆ ಕಾಯದೇ ದೇವಸ್ಥಾನದ ಕಡೆ ಹೊರಟುಹೋದರು.

ಅತ್ತ ಪೂರ್ಣರನ್ನು ಕುಟೀರದಲ್ಲಿ ಕಾಣದೆ, ರಾಮಾನುಜರು ಮರಳಿ ಮನೆಗೆ ಬಂದರು. ಅಷ್ಟರಲ್ಲಿ ಅವರ ಪತ್ನಿ ರಕ್ಷಾಂಬಾಳ್, ಪೂರ್ಣರು ಊಟಮಾಡಿದ ಎಲೆಯನ್ನು ಕೋಲಿನಿಂದ ಹೊರಕ್ಕೆಸೆದು, ಸ್ಥಳವನ್ನು ಶುದ್ಧಿಮಾಡಿ ಮತ್ತೆ ಸ್ನಾನ ಮಾಡಿ ಬಂದಳು. ರಾಮಾನುಜರು, "ಎರಡನೇ ಸಲ ಸ್ನಾನವೇಕೆ ಮಾಡಿದೆ?" ಎಂದು ಕೇಳಿದರು. ರಕ್ಷಾಂಬಾಳ್ "ಅವನು ಬ್ರಾಹ್ಮಣನಲ್ಲ, ಆದ್ದರಿಂದ ಹಾಗೆ ಮಾಡಿದೆ" ಎನ್ನಲು, ರಾಮಾನುಜರು ಬಹಳ ವ್ಯಥೆಪಟ್ಟರು. ಪತ್ನಿಯ ಈ ರೀತಿಯ ನಡೆವಳಿಕೆ ಅವರಿಗೆ ಹಿಡಿಸಲಿಲ್ಲ. ಅವರು ಹೇಳಿದರು : "ಜನಿವಾರವನ್ನು ಧರಿಸಿದ ಮಾತ್ರಕ್ಕೆ ಬ್ರಾಹ್ಮಣನೆ? ಯಾರು ಭಗವದ್ಭಕ್ತನೊ ಅವನೇ ಬ್ರಾಹ್ಮಣ."

ಕೆಲವು ದಿನಗಳ ನಂತರ ರಾಮಾನುಜರು ಯಾಮುನಾಚಾರ್ಯರ ಶಿಷ್ಯರಾದ ಮಹಾಪೂರ್ಣರಿಗೆ ಕುಟುಂಬದೊಡನೆ, ತಮ್ಮ ಮನೆಯ ಮಹಡಿ ಮೇಲೆ ಇರಲು ಅವಕಾಶ ಮಾಡಿಕೊಟ್ಟರು. ಆಗ ಮಹಾಪೂರ್ಣರಿಂದ ರಾಮಾನುಜರು ಆರು ತಿಂಗಳು ಕಾಲ ವೈಷ್ಣವಶಾಸ್ತ್ರವನ್ನು ಕಲಿತರು. ಒಮ್ಮೆ ಮಹಾಪೂರ್ಣರು ಹಸಿದಿದ್ದ ಕಾರಣ, ರಾಮಾನುಜರು ಪತ್ನಿಯನ್ನು ಕರೆದು, ಏನಾದರೂ ಆಹಾರ ಮಿಕ್ಕಿದ್ದರೆ, ಹಿಂದಿನ ರಾತ್ರಿಯದಾದರೂ ಸರಿ, ತಂದುಕೊಡಲು ಹೇಳಿದರು. ಪತ್ನಿ, ಸಿಡುಕಿನಿಂದ ಏನೂ ಮಿಕ್ಕಿಲ್ಲವೆಂದು ಹೇಳಿದರು. ಆದರೂ ರಾಮಾನುಜರಿಗೆ, ಅನುಮಾನವಾಗಿ, ಅಡುಗೆ ಮನೆಯಲ್ಲಿ ಹೋಗಿ ನೋಡಲು, ಬೇಕಾದಷ್ಟು ಆಹಾರ ಮಿಕ್ಕಿದ್ದನ್ನು ಕಂಡರು. ಬಹಳ ನೊಂದುಕೊಂಡು, "ನೀನೇಕೆ ಸುಳ್ಳು ಹೇಳಿದೆ? ಇದೆಂತಹ ಪಾಪಗೈದೆ? ಆಹಾರವಿದ್ದರೂ ಹೊರಗಿನವರು, ಅದರಲ್ಲೂ ಹಸಿದವರಿಗೆ, ತಿನ್ನಲು ನೀಡದೆ ತಪ್ಪು ಮಾಡಿದೆಯಲ್ಲಾ" ಎಂದು ಪತ್ನಿಗೆ ಹೇಳಿದರು.

ಮತ್ತೊಮ್ಮೆ ಬೆಳಗಿನ ಜಾವ ರಾಮಾನುಜರ ಪತ್ನಿ ಬಾವಿಯಿಂದ ನೀರು ತರಲು ಹೋದರು. ಅಷ್ಟರಲ್ಲಿ ಗುರುಪತ್ನಿ ಸಹ ನೀರಿಗಾಗಿ ಅಲ್ಲಿ ಬಂದಿದ್ದರು. ತಾವು ಮೇಲ್ವರ್ಗದವರಾದ್ದರಿಂದ ಮೊದಲು ತಾನು ನೀರು ತೆಗೆದುಕೊಳ್ಳುವೆನೆಂದು ರಾಮಾನುಜರ ಪತ್ನಿ ಗುರುಗಳ ಪತ್ನಿಯನ್ನುದ್ದೇಶಿಸಿ ಕಟುವಾಗಿ ಹೇಳಿದರು. ಈ ವಿಷಯವಾಗಿ ಇಬ್ಬರಿಗೂ ವಾಗ್ವಾದ ನಡೆಯಿತು. ಮಹಾಪೂರ್ಣರು ಹೊರಗೆ ಬಂದು, ಆ ಘಟನೆಯನ್ನು ನೋಡಿ ಬಹಳ ನೊಂದರು. ಇನ್ನು ತಾವು ಇಲ್ಲಿರುವುದು ಸರಿಯಲ್ಲವೆಂದು ತೀರ್ಮಾನಿಸಿ, ಪತ್ನಿಯ ಸಮೇತರಾಗಿ, ರಾಮಾನುಜರಿಗೆ ಕಾಯದೆ ಕಾಂಚಿಯನ್ನು ಬಿಟ್ಟು ಶ್ರೀರಂಗಕ್ಕೆ ತೆರಳಿದರು.

ಇತ್ತ ರಾಮಾನುಜರು ಬಂದು ಆಚಾರ್ಯರಿಗಾಗಿ ಹುಡುಕಿದರು. ವಿಷಯ ತಿಳಿದಮೇಲೆ ಪತ್ನಿ ರಕ್ಷಾಂಬಾಳ್‌ಳನ್ನು ಕರೆದು, "ನೀನು ಮೂರು ಸಲ ಪಾಪವನ್ನು ಗೈದೆ. ಮೊದಲನೆಯದು, ಪೂರ್ಣರು ಊಟಮಾಡಿದ್ದನ್ನು ಮೈಲಿಗೆ, ಅಪವಿತ್ರವೆಂದು ಪರಿಗಣಿಸಿದ್ದು. ಎರಡನೇ ಸಲ, ಮನೆಯಲ್ಲಿ ಆಹಾರವಿದ್ದರೂ, ಹಸಿದವರಿಗೆ ಉಣಲು ಕೊಡಲಿಲ್ಲ. ಮೂರನೆಯದಾಗಿ, ಗುರುಗಳ ಪತ್ನಿಯೊಡನೆ ಅನವಶ್ಯವಾಗಿ ನೀರಿನ ಸಂಬಂಧವಾಗಿ ಜಗಳ ಮಾಡಿದೆ. ಇನ್ನು ನೀನು ನನ್ನ ಜೊತೆ ಇರಲು ಸಾಧ್ಯವಿಲ್ಲ ಮತ್ತು ಯೋಗ್ಯಳೂ ಅಲ್ಲ. ಇಂತಹ ಕೆಟ್ಟ ಸಂಸ್ಕಾರ ಉಳ್ಳವಳ ಜೊತೆ ನಾನು ಬಾಳಲಾರೆ. ನಿನ್ನಲ್ಲಿ ದೈವಿಕ ಸ್ವಭಾವಗಳೇ ಇಲ್ಲ. ನಿನಗೆ ಬೇಕಾದ ಧನ, ಧಾನ್ಯವನ್ನೆಲ್ಲ ತೆಗೆದುಕೊಂಡು, ನೀನು ಎಲ್ಲಿಂದ ಬಂದೆಯೋ ಅಲ್ಲಿಗೇ ಹೋಗು" ಎಂದು ಹೇಳಿ ಅವಳನ್ನು ತವರಿಗೆ ಕಳಿಸಿಬಿಟ್ಟರು. ಅನಂತರ ವರದರಾಜನ ಸನ್ನಿಧಿಯಲ್ಲಿ ಶರಣಾಗಿ, "ಈ ಸಾಂಸಾರಿಕ ಕ್ಲೇಶವನ್ನು ಕಂಡದ್ದು ಸಾಕು, ನನಗೆ ಸಂನ್ಯಾಸವನ್ನು ಅನುಗ್ರಹಿಸು ದೇವ" ಎಂದು ಬೇಡಿದರು. ಇಲ್ಲಿಂದ ಮುಂದೆ ಅವರು "ರಾಮಾನುಜಮುನಿ" ಎಂಬ ಹೆಸರಿನಿಂದ ಸಂನ್ಯಾಸ ಸ್ವೀಕರಿಸಿದರು. ಹೀಗೆ ಅವರು ತಮ್ಮ ಗೃಹಸ್ಥಾಶ್ರಮಕ್ಕೆ ವಿದಾಯ ಹೇಳಿದರು.

ಅನಂತರ ರಾಮಾನುಜರು ಕಾಂಚಿಯಿಂದ ಶ್ರೀರಂಗಕ್ಕೆ ಬಂದು ತಮ್ಮ ಪತ್ನಿಯಿಂದ ಅವಮಾನಿತರಾದ ಮಹಾಪೂರ್ಣರನ್ನು ಭೆಟ್ಟಿಯಾದರು. ಮಹಾಪೂರ್ಣರ ಕುಟೀರಕ್ಕೆ ಹೋಗಿ ಸಾಷ್ಟಾಂಗ ಪ್ರಣಾಮಮಾಡಿ, ತಮ್ಮಿಂದಾದ ಅಪಚಾರಕ್ಕಾಗಿ ಕ್ಷಮೆ ಬೇಡಿದರು. ಮತ್ತೆ ಕಾಂಚಿಗೆ ಹಿಂದಿರುಗಿ ಮಹಾಪೂರ್ಣರ ಮಾರ್ಗದರ್ಶನದಂತೆ ಶಾಸ್ತ್ರಾಧ್ಯಯನ ಹಾಗೂ ಅನುಷ್ಠಾನದಲ್ಲಿ ತೊಡಗಿದರು.

ಶ್ರೀರಂಗದಲ್ಲಿ ಯಾಮುನಾಚಾರ್ಯರು ವೈಷ್ಣವ ಸಮುದಾಯದ ಮುಖಂಡರಾಗಿದ್ದರು. ಅವರಿಗೆ ಕಾಂಚೀಪೂರ್ಣ, ಮಹಾಪೂರ್ಣ ಇವರೇ ಮುಂತಾದ ಅನೇಕ ಶಿಷ್ಯರಿದ್ದರು. ಆದರೂ ಅವರು ತಮ್ಮ ಉತ್ತರಾಧಿಕಾರಿಗಾಗಿ ಒಳ್ಳೆಯ ಶಿಷ್ಯನನ್ನು ಹುಡುಕುತ್ತಿದ್ದರು. ಆ ವೇಳೆಯಲ್ಲಿ ಅವರಿಗೆ ರಾಮಾನುಜರ ಹೆಸರು ತಿಳಿದು ಬಂತು. ಯಾಮುನಾಚಾರ್ಯರು ಕಾಂಚೀಪುರಕ್ಕೆ ತಮ್ಮ ಶಿಷ್ಯವೃಂದದ ಜೊತೆ ಬಂದು,

ಕಾಂಚೀಪೂರ್ಣರನ್ನು ಭೇಟಿಯಾದರು. ಗುರುಗಳನ್ನು ಕಂಡು, "ಇದೇನು ಹೀಗೆ ಅವಸರದಲ್ಲಿ ಬಂದಿರಿ, ನೀವು ಹೇಳಿ ಕಳುಹಿಸಿದ್ದರೆ, ನಾನೇ ಸ್ವತಃ ತಮ್ಮನ್ನು ಕಾಣಲು ಬರುತ್ತಿದ್ದೆ. ಈ ಅನಿರೀಕ್ಷಿತ ಆಗಮನಕ್ಕೆ ಕಾರಣವೇನು ಗುರುಗಳೇ?" ಎಂದು ಕಾಚೀಪೂರ್ಣರು ಕೇಳಿದರು. "ಶಿಷ್ಯ, ಇದರಲ್ಲಿ ಆಶ್ಚರ್ಯ ಸಂಗತಿ ಏನಿಲ್ಲ. ವರದರಾಜನ ಸೇವೆ ಮಾಡ ಬೇಕೆನಿಸಿತು. ಆದ್ದರಿಂದ ಬಂದೆ. ಇರಲಿ. ಆ ನಿನ್ನ ರಾಮಾನುಜ ಯಾರು? ಯಾದವಪ್ರಕಾಶರಲ್ಲಿ ವ್ಯಾಸಂಗ ಮಾಡುವಾಗ ಪ್ರಾಣಾ ಪಾಯದಿಂದ ಪಾರಾದನಂತಲ್ಲ? ಅದನ್ನೆಲ್ಲ ವಿವರವಾಗಿ ತಿಳಿಸು" ಎಂದರು ಯಾಮುನರು.

ಗುರುಗಳ ಪ್ರಶ್ನೆಗೆ ಉತ್ತರವಾಗಿ ಕಾಂಚೀಪೂರ್ಣರು ಹಿಂದೆ ನಡೆದ ಸಂಗತಿಯನ್ನೆಲ್ಲಾ ತಿಳಿಸಿದರು. ಆಗ ಯಾಮುನಾ ಚಾರ್ಯರಿಗೆ, ರಾಮಾನುಜರ ಮಹಿಮೆ ಅರಿವಾಯಿತು. ತನ್ನ ಉತ್ತರಾಧಿಕಾರಿಯಾಗಿ ಈತನೇ ಸರಿ ಎಂದು ಮನದಲ್ಲಿ ತೀರ್ಮಾನಿಸಿದರು. ಆದರೆ ಅಲ್ಲಿ ಉಳಿದು, ರಾಮಾನುಜರನ್ನು ಕಾಣಲಾಗಲಿಲ್ಲ. ಕಾರಣ ಅವರು ತ್ವರಿತವಾಗಿ ಶ್ರೀರಂಗನ ಸೇವೆಗೆ ಶ್ರೀರಂಗಕ್ಕೆ ಹೋಗಬೇಕಿತ್ತು. ಈಗ ಅವರಿಗೆ ಬೇರೆ ಮಾರ್ಗ ತಿಳಿಯದೆ ವರದರಾಜನ ಸನ್ನಿಧಿಗೆ ಬಂದು, ಭಕ್ತಿಯಿಂದ ಕೈಜೋಡಿಸಿ, "ಸ್ವಾಮಿ, ನನಗೊಂದು ವರ ನೀಡು. ಶರಣಾಗತವತ್ಸಲನಾದ ನಿನ್ನನ್ನು ನಾನು ಶರಣುಹೊಂದಿದ್ದೇನೆ. ನನ್ನ ಮತದ ಏಳಿಗೆಗಾಗಿ, ಸಿದ್ಧಾಂತ ಪ್ರಚಾರಕ್ಕಾಗಿ ನಿನ್ನ ಭಕ್ತನಾದ ರಾಮಾನುಜನನ್ನು ದಯಮಾಡಿ ಅನುಗ್ರಹಿಸು" ಎಂದು ಪ್ರಾರ್ಥಿಸಿದರು. ಇದನ್ನು ಯಾರಿಗೂ ತಿಳಿಸದೇ ಅವಸರವಾಗಿ ಶ್ರೀರಂಗಕ್ಕೆ ತೆರಳಿದರು. ಹೀಗಿರುವಲ್ಲಿ, ಕೆಲ ಕಾಲಾನಂತರ, ಯಾಮುನಾಚಾರ್ಯರಿಗೆ ಅನಾರೋಗ್ಯವುಂಟಾಯಿತು. ರೋಗ ಉಲ್ಬಣಿಸಿ ತಮ್ಮ ಅಂತ್ಯಕಾಲ ಸಮೀಪಿಸುತ್ತಿದೆ ಎಂಬುದನ್ನು ಅರಿತುಕೊಂಡರು. ಕೂಡಲೆ ರಾಮಾನುಜರನ್ನು ಕರೆತರಲು ಶಿಷ್ಯರನ್ನು ಕಾಂಚೀಪುರಕ್ಕೆ ಕಳುಹಿಸಿದರು.

ಅಷ್ಟರಲ್ಲಿ ಶಿಷ್ಯವೃಂದವನ್ನೆಲ್ಲಾ ಕರೆದು, "ಶ್ರೀಮನ್ನಾ ರಾಯಣನ ನಾಮವನ್ನು ನಿರಂತರ ಜಪಿಸಿ. ಭಗವಂತನಿಗೂ, ಭಕ್ತನಿಗೂ ಭೇದವಿಲ್ಲ. ಧ್ಯಾನಮಾಡುವಾಗ ಫಲಾಪೇಕ್ಷೆ ಮಾಡಬೇಡಿ" ಎಂದು ಉಪದೇಶಿಸಿ ಕೊನೆಘಳಿಗೆಯಲ್ಲಿ ಶ್ರೀರಂಗನ ದರ್ಶನ ಮಾಡಿ, ಶಿಷ್ಯರ ಸಹಾಯದಿಂದ ಕುಟೀರಕ್ಕೆ ಹಿಂತಿರುಗಿದರು. ರಾಮಾನುಜರಿಗಾಗಿ ಕಾದರು. ಇನ್ನೂ ಬಂದಿರ ಲಿಲ್ಲ. ಆದರೆ ಕಾಲವೆಂಬುದು ಯಾರಿಗೂ ಕಾಯುವುದಿಲ್ಲ. ಯಾಮುನಾಚಾರ್ಯರು ಪದ್ಮಾಸನಸ್ಥರಾಗಿ ಕುಳಿತು ಭಗವಂತನ ಧ್ಯಾನಪರರಾಗಿ ನಿತ್ಯವಿಭೂತಿಯನ್ನು ಸೇರಿದರು. ಶರಣರ ಮರಣವೂ ಒಂದು ಆನಂದದಾಯಕ.

ಅಲ್ಲಿ, ಕಾಂಚೀಪುರದಲ್ಲಿ ಸಮಾಚಾರ ತಿಳಿದು ರಾಮಾ ನುಜರು ಯಾಮುನಾಚಾರ್ಯರನ್ನು ಕಾಣಲು ತ್ವರಿತವಾಗಿ ಬಂದರು. ಆಗಿನ ಕಾಲದಲ್ಲಿ ಈಗಿನಂತೆ ರೈಲು, ಬಸ್ಸುಗಳ ಸೌಕರ್ಯವಿರಲಿಲ್ಲ. ಹೀಗಾಗಿ ರಾಮಾನುಜರು ಶ್ರೀರಂಗವನ್ನು ತಲಪುವ ವೇಳೆಗೆ ಕಾಲ ಮೀರಿತ್ತು. ಕಾವೇರಿತೀರಕ್ಕೆ ಬರುವ ವೇಳೆಗೆ, ಜನರ ಗುಂಪು ಸೇರಿತ್ತು. ಯಾಮುನಮುನಿಯ ಶರೀರ ಸಂಸ್ಕಾರಕ್ಕೆ ಎಲ್ಲ ಏರ್ಪಾಟು ಮಾಡಲಾಗಿತ್ತು. ಇದನ್ನರಿತ ರಾಮಾನುಜರು ಅಲ್ಲೇ ಕುಸಿದುಬಿದ್ದರು. ಗುರುಗಳ ಕೊನೆಯ ಸಂದೇಶವನ್ನು ತಿಳಿದುಕೊಳ್ಳಲಾಗಲಿಲ್ಲವೆಂದು ಬಹಳ ದುಃಖಿಸಿದರು.

ಅಷ್ಟರಲ್ಲಿ ಅವರಿಗೆ ಒಂದು ಆಶ್ಚರ್ಯ ಕಾದಿತ್ತು. ಹತ್ತಿರ ಹೋಗಿ ನೋಡಲು, ಮುನಿಗಳ ಬಲಗೈಯ ಮೂರು ಬೆರಳುಗಳು ಮಡಿಚಿಕೊಂಡಿದ್ದವು. ಇದನ್ನು ಬೇರೆ ಯಾರೂ ಗಮನಿಸಿರಲಿಲ್ಲ. ರಾಮಾನುಜರು ಶಿಷ್ಯರನ್ನು ವಿಚಾರಿಸಿದರು. ಯಾರಿಗೂ ಅದರ ಮರ್ಮ ತಿಳಿದಿರಲಿಲ್ಲ. "ಗುರುಗಳಿಗೆ ಏನಾದರೂ ಬಯಕೆ ಇತ್ತೇ? ಸತ್ಸಂಗ ಪ್ರವಚನದಲ್ಲಿ ಏನಾದರೂ ಹೇಳಿದ್ದರೇ, ಯೋಚಿಸಿ ಹೇಳಿ" ಎಂದು ಕೇಳಿದರು ರಾಮಾನುಜರು. ಅವರಿಗೆ ಉತ್ತರಿಸುತ್ತಾ ಕೆಲವು ಶಿಷ್ಯರು, ಯಾಮುನರು ಆಗಾಗ ಪ್ರಸ್ತಾಪಿಸುತ್ತಿದ್ದ ಮೂರು ವಿಷಯ ಗಳನ್ನು ತಿಳಿಸಿದರು:

೧. **ವೇದಾಂತಸೂತ್ರಗಳು, ಉಪನಿಷತ್ತುಗಳು ಮತ್ತು ಗೀತೆ, ಇವುಗಳನ್ನು ಸಾಮಾನ್ಯ ಜನರಿಗೆ ತಿಳಿದುಬರುವಂತೆ ವ್ಯಾಖ್ಯಾನಿಸಬೇಕು.**

೨. **ಆಳ್ವಾರುಗಳು ರಚಿಸಿದ ದಿವ್ಯಪ್ರಬಂಧದ ಅರ್ಥವನ್ನು ಜನರಿಗೆ ತಿಳಿಸಬೇಕು.**

೩. **ವಿಶಿಷ್ಟಾದ್ವೈತದ ಸಂಪ್ರದಾಯವನ್ನು ಎಲ್ಲರಿಗೂ ಜಾತಿ-ಮತ ಭೇದವನ್ನು ಪರಿಗಣಿಸದೇ ಬೋಧಿಸಬೇಕು.**

ಕೂಡಲೆ ರಾಮಾನುಜರು, "ಹಾಗಾದರೆ, ಗುರುವೇ! ನಿಮ್ಮ ಈ ಮೂರು ಬಯಕೆಗಳನ್ನು ನಾನು ನೆರವೇರಿಸುತ್ತೇನೆ. ದಾಸನ ಮೇಲೆ ಕೃಪೆ ಮಾಡಿ, ಇದೇ ನನ್ನ ಪ್ರತಿಜ್ಞೆ!" ಎಂದು ಗಟ್ಟಿ ಯಾಗಿ ಕೂಗಿ ಘೋಷಿಸಿದರು. ವಿಸ್ಮಯವೋ ಎಂಬಂತೆ ಗುರು ಗಳ ಬೆರಳುಗಳು ನೆಟ್ಟಗಾದವು.

ಅಲ್ಲಿ ನೆರೆದಿದ್ದ ಜನಸಮೂಹವೆಲ್ಲ, "ಯಾಮುನಮುನಿಗಳ ಅನುಗ್ರಹ ನಿಮಗಾಗಿದೆ, ಅವರ ಪೂಜ್ಯಪೀಠಕ್ಕೆ ನೀವೇ ಅರ್ಹರು" ಎಂದು ರಾಮಾನುಜರಿಗೆ ಹೇಳಿದರು. ಅನಂತರ ಮಹಾಪೂರ್ಣರು ಗೋಷ್ಠಿಪೂರ್ಣರಲ್ಲಿ ಹೋಗಿ, ತಾನು ಮಹಾ ಪೂರ್ಣರ ದಾಸನು, ತನಗೆ ತತ್ವಜ್ಞಾನ, ಮಂತ್ರದೀಕ್ಷೆ ಕೊಡಿ ರೆಂದು ಬಿನ್ನವಿಸಿಕೊಳ್ಳಬೇಕೆಂದು ರಾಮಾನುಜರಿಗೆ ತಿಳಿಸಿದರು. ಆದರೆ ಆ ಹಿರಿಯರು ರಾಮಾನುಜರನ್ನು ದೃಷ್ಟಿಸಿಯೂ ನೋಡದೆ ಅಲಕ್ಷ್ಯಭಾವದಿಂದ ಹಿಂತಿರುಗಿ ಕಳುಹಿಸಿಬಿಟ್ಟರು.

ಹೀಗಿರುವಲ್ಲಿ ಒಮ್ಮೆ ಗೋಷ್ಠಿಪೂರ್ಣರು ಶ್ರೀರಂಗಕ್ಕೆ ಹೋಗಿದ್ದಾಗ ರಂಗನಾಥನು ಅರ್ಚಕರ ಮೂಲಕ, ರಾಮಾನುಜರಿಗೆ ಮಂತ್ರದೀಕ್ಷೆ ಕೊಡಬೇಕೆಂದೂ ಅವರ ವಿಚಾರದಲ್ಲಿ ಅನುಮಾನ ಪಡಬೇಕಿಲ್ಲವೆಂದೂ ಅದಕ್ಕೆ ತಕ್ಕ ಯೋಗ್ಯತೆಗಳೆಲ್ಲ ರಾಮಾನುಜರಲ್ಲಿವೆಯೆಂದೂ ತಿಳಿಸಿದನು.

ಅದರಂತೆ ಗೋಷ್ಠಿಪೂರ್ಣರು ರಾಮಾನುಜರಿಗೆ ತಮ್ಮಲ್ಲಿಗೆ ಬರಲು ಹೇಳಿದರು. ರಾಮಾನುಜರು ಬಂದು ಪಾದಗಳಿಗೆರಗಿ, ವಂದಿಸಲು, "ಈಗಲ್ಲ, ನೀನು ಹಿಂದಿರುಗಿ ಹೋಗಿ ಮತ್ತೆ ಬಾ" ಎಂದು ಕಳುಹಿಸಿದರು. ವಿಧಿಯಿಲ್ಲದೇ ಬೇಸರಿಸಿಕೊಳ್ಳದೆ ಶಾಂತ ಮನಸ್ಸಿನಿಂದಲೇ ರಾಮಾನುಜರು ಶ್ರೀರಂಗಕ್ಕೆ ಹಿಂತಿರುಗಿದರು. ಹೀಗೆ, ಗುರು ಕರೆಸುವುದು, ಮತ್ತೊಮ್ಮೆ 'ಬಾ' ಎಂದು ಹೇಳುವುದು, ಸುಮಾರು ಹದಿನೆಂಟು ಬಾರಿ ಆಯಿತು. ಗುರು ಬೇಕೆಂತಲೇ ಶಿಷ್ಯನನ್ನು ಪರೀಕ್ಷಿಸಲೆಂದೇ ಈ ರೀತಿ ಮಾಡಿದ್ದರು.

ಅನಂತರ ರಾಮಾನುಜರ ಮನಸ್ಸು ಪಕ್ವವಾಗಿರುವುದನ್ನರಿತು, "ಓಂ ನಮೋ ನಾರಾಯಣಾಯ" ಎಂಬ ತಿರುಮಂತ್ರದ ದೀಕ್ಷೆಯನ್ನು ಕರುಣಿಸಿದರು. ಇದೀಗ ರಾಮಾನುಜರಿಗೆ ಪರಮಾನಂದವಾಯಿತು. ಈ ಮಂತ್ರವನ್ನು ಸದಾ ಪವಿತ್ರ ಮನಸ್ಸಿನಿಂದ ಜಪಿಸಿದರೆ ಭಕ್ತಿ, ಜ್ಞಾನ, ಪ್ರಾಪ್ತಿಯಾಗುವುದೆಂದು ಗುರು ಹೇಳಿದರು. ಈ ಮಂತ್ರವನ್ನು ಗೋಪ್ಯವಾಗಿಡುವುದಾಗಿ ಗುರುಗಳ ಬಳಿ ಪ್ರತಿಜ್ಞೆ ಮಾಡಿದ್ದರೂ ಸಹ, ರಾಮಾನುಜರು ತಮ್ಮ ಮನದಲ್ಲಿ "ಇಂತಹ ದಿವ್ಯಮಂತ್ರವನ್ನು ಗೋಪ್ಯವಾಗಿ ಏಕೆ ಇಡಬೇಕು? ಶ್ರೀಮನ್ನಾರಾಯಣನು ಎಲ್ಲ ಜೀವಕೋಟಿಗಳಿಗಲ್ಲದೆ ಹೋದರೆ ಏನು ಫಲ? ಪಾಪಿ, ಪರದೇಶಿ, ಎಲ್ಲ ಜೀವಿಗಳೂ ಉದ್ಧಾರವಾಗಬೇಕು, ಇದರಿಂದ ತಮಗೆ ಎಂತಹ ಕಠಿಣ ಶಿಕ್ಷೆಯಾದರೂ ಸರಿ, ಸಾಮಾನ್ಯ ಮಾನವನಿಗೂ ಕೂಡ ಈ ಮಂತ್ರ ಲಭಿಸಬೇಕು" ಎಂದು ಯೋಚಿಸಿ, ಒಂದು ದೇವಾಲಯದ ಮೇಲೇರಿ, ಎಲ್ಲರನ್ನೂ ಕೂಗಿ ಕರೆದು, ಜಾತಿ, ಮತ, ಭೇದ ಯಾವುದನ್ನೂ ಪರಿಗಣಿಸದೆ ರಹಸ್ಯಪೂರ್ಣವಾದ ದಿವ್ಯ ಮಂತ್ರವನ್ನು ಸಾರಿ ತಿಳಿಸಿದರು.

ಇದನ್ನು ತಿಳಿದ ಗುರು ಗೋಷ್ಠಿಪೂರ್ಣರು ರಾಮಾನುಜರನ್ನು ಬರಮಾಡಿ, ಬಹಳ ಕೋಪದಿಂದ "ನಾನು ಉಪದೇಶಿಸಿದ ದಿವ್ಯಮಂತ್ರವನ್ನು ಗೋಪ್ಯವಾಗಿಡಬೇಕೆಂದು ಹೇಳಿದ್ದರೂ ನನ್ನ ಅಪ್ಪಣೆ ಇಲ್ಲದೆ ಹೀಗೇಕೆ ಮಾಡಿದೆ? ನನ್ನನ್ನು ಅವಮಾನ ಪಡಿಸಿದೆ? ನೀನು ಈಗ ವಚನಭ್ರಷ್ಟನಾದೆ, ನಿನಗೇನು ಶಿಕ್ಷೆ ವಿಧಿಸಲಿ ನೀನೇ ಹೇಳು" ಎಂದರು. ರಾಮಾನುಜರು ಸ್ವಲ್ಪವೂ ವಿಚಲಿತರಾಗದೆ ನಮ್ರತೆಯಿಂದ, "ಆಚಾರ್ಯರೇ! ನಾನು ತಪ್ಪು ಮಾಡಿದೆ ನಿಜ. ಆದರೆ, ಈ ತತ್ತ್ವ ಸಾಮಾನ್ಯ ಜೀವಿಗಳಿಗೆ ತಲಪುವ ಬಗೆ ಹೇಗೆ? ಅಲ್ಲದೆ, ಇದರಿಂದ ತಮ್ಮ ಮಹಿಮೆಯೂ ಎಲ್ಲರಿಗೂ ತಿಳಿಯಲಿ ಎಂದು ಹೀಗೆ ಮಾಡಿದೆ. ನಾನು ಮಾಡಿದ ತಪ್ಪಿಗೆ ನನಗೆ ನರಕವೇ ಗತಿ, ಅದನ್ನೇ ನನಗೆ ಶಿಕ್ಷೆಯಾಗಿ ವಿಧಿಸಿ" ಎಂದರು. "ಇದನ್ನೆಲ್ಲ ತಿಳಿದವನಾಗಿಯೂ, ಹೀಗೇಕೆ ಮಾಡಿದೆ?" ಎಂದು ಮತ್ತೊಮ್ಮೆ ಗುರುಗಳು ಕೇಳಲು, ರಾಮಾನುಜರು, "ನನ್ನ ಅವಿಧೇಯತೆಗೆ ನರಕವನ್ನು ಅನುಭವಿಸಲು ಸಿದ್ಧ. ನನಗೊಬ್ಬನಿಗೇ ನರಕಪ್ರಾಪ್ತಿಯಾದರೂ ಸರಿ, ಈ ನನ್ನ ಚಿಕ್ಕ ತ್ಯಾಗದಿಂದ ಬಹಳ ಜನರಿಗೆ ಉಪಯೋಗವಾಗಲಿ, ಅದರಿಂದ ನನಗೆ ಆ ನರಕವೇ ಸ್ವರ್ಗದಂತೆ. ಈಗ ನೀವು ಬೇಕಾದ ಶಿಕ್ಷೆ ವಿಧಿಸಿರಿ, ಗುರುಗಳೇ" ಎಂದು ಕೈ ಜೋಡಿಸಿ ಬೇಡಿದರು. ಗುರು ಗೋಷ್ಠಿಪೂರ್ಣರು, "ಆಹಾ! ಇಂತಹ ವಿಚಾರ ನನ್ನ ಹೃದಯದಲ್ಲಿ ಬರಲಿಲ್ಲವೇಕೆ?" ಎಂದು ದುಃಖಿಸಿ, ರಾಮಾನುಜರನ್ನು ಆಲಿಂಗಿಸಿ, "ರಾಮಾನುಜ, ನೀನು ಮಾತಿನಿಂದ ನನ್ನನ್ನು ಸೋಲಿಸಿಬಿಟ್ಟೆ. ನೀನು ಸಾಮಾನ್ಯ ಮನುಷ್ಯನಲ್ಲ, ಸಾಕ್ಷಾತ್ ಭಗವಂತನ ಸ್ವರೂಪ" ಎಂದು ಕೊಂಡಾಡಿ ಆಶೀರ್ವದಿಸಿದರು.

ಮುಂದೆ ರಾಮಾನುಜಾಚಾರ್ಯರು ಯಾಮುನಾಚಾರ್ಯರ ಮೂರೂ ಅಭಿಲಾಷೆಗಳನ್ನು ಪೂರೈಸಿದರು. ದೇಶದಾದ್ಯಂತ ಸುತ್ತಾಡಿ ವೈಷ್ಣವಧರ್ಮವನ್ನು ಪ್ರಚಾರ ಮಾಡಿದರು. ವೈಷ್ಣವ ಸಮುದಾಯದ ಮುಖಂಡರಾಗಿ ಹೊಸ ಸುಧಾರಣೆಗಳನ್ನು ಜಾರಿಗೊಳಿಸಿದರು. ಶೈವಮತಾವಲಂಬಿಯಾದ ಚೋಳರಾಜನ ಉಪಟಳದಿಂದಾಗಿ ಕರ್ನಾಟಕಕ್ಕೆ ಬಂದು ಮೇಲುಕೋಟೆಯಲ್ಲಿ ತಮ್ಮ ಕೇಂದ್ರವನ್ನು ಸ್ಥಾಪಿಸಿದರು. ಜೈನರಾಜನಾದ ಬಿಟ್ಟಿದೇವನನ್ನು ವೈಷ್ಣವಧರ್ಮಕ್ಕೆ ಮತಾಂತರಿಸಿ, ಅವನ ಸಹಾಯದಿಂದ ರಾಜ್ಯದಲ್ಲಿ ತಮ್ಮ ಧರ್ಮವನ್ನು ಪ್ರಚಾರ ಮಾಡಿದರು. ಮುಂದೆ ಪುನಃ ಶ್ರೀರಂಗಕ್ಕೆ ಹಿಂದಿರುಗಿ, ಕ್ರಿ.ಶ. ೧೧೩೭ರಲ್ಲಿ ದೇಹತ್ಯಾಗ ಮಾಡಿದರು.

**ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ।**
**ಅಹಂ ತ್ವಾ ಸರ್ವಪಾಪೇಭ್ಯೋ**
**ಮೋಕ್ಷಯಿಷ್ಯಾಮಿ ಮಾ ಶುಚಃ ॥**

(ಎಲ್ಲ ಧರ್ಮಗಳನ್ನೂ ಪರಿತ್ಯಾಗ ಮಾಡಿ ನನ್ನೊಬ್ಬನನ್ನೇ ಶರಣು ಹೊಂದು. ನಾನು ನಿನ್ನನ್ನು ಎಲ್ಲ ಪಾಪಗಳಿಂದಲೂ ಬಿಡಿಸುವೆನು. ಶೋಕಿಸಬೇಡ) ಎಂಬ ಶ್ಲೋಕದಂತೆ ಶರಣಾಗತಿಯ ಮೂಲಕ ಜನ್ಮ ಸಾರ್ಥಕ ಮಾಡಿಕೊಳ್ಳಬಹುದೆಂಬುದನ್ನು ರಾಮಾನುಜರು ಪ್ರಪಂಚಕ್ಕೆ ಸಾರಿ ಹೇಳಿದರು. ವಿಶಿಷ್ಟಾದ್ವೈತದ ಸಾರವೆಂದರೆ, ಪರಮಭಕ್ತಿಯಿಂದ, ಶರಣಾಗತಿಯಿಂದ ಪರಮಪುರುಷನನ್ನು ಹೊಂದಬಹುದು ಎಂಬುದು. ಇಲ್ಲಿ ಆಚಾರ್ಯರು ಒತ್ತಿ ಒತ್ತಿ ಹೇಳುತ್ತಾರೆ : "ಭಗವಂತನಿಗೆ ಶರಣಾಗು, ರಕ್ಷಿಸಲು ಸಮರ್ಥನಾದ ರಕ್ಷಕ ಶ್ರೀಮಾನ್ ನಾರಾಯಣನಿಗೆ ಶರಣಾಗು. ನಮ್ಮ ಅಂತರಂಗವನ್ನು ಅವನ ಪಾದಪದ್ಮಗಳಲ್ಲಿ ತೋಡಿಕೊಳ್ಳಬೇಕು. ನನ್ನದೇನೂ ಇಲ್ಲ, ಎಲ್ಲ ನಿನ್ನದೇ ಎಂಬ ಭಾವನೆ ಬೆಳೆಸಿಕೊ. ಇದು ಪರಮಭಾಗವತದ ಮತ." ❋